# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಸಂಪಾದಕ : ಮಂಜು ಬನವಾಸೆ

ಹಾಸನ    E-mail : kannadapostnews@gmail.com    / ಕನ್ನಡ post    Price: ₹1

Vol.No.02 | Issue. 96 | Pages. 2 | Date: 15-03-2026, SUNDAY    RNI NO: KARKAN/2024/89601    Kannada Daily

ಸಂಪುಟ : 02 – ಸಂಚಿಕೆ : 96 – ಪುಟಗಳು : 2    15-03-2026    ಭಾನುವಾರ    Ph: 8762954248    ದರ : ₹1


# ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಅಗತ್ಯ ಕ್ರಮ

## ಎಂಸಿಇ ಕಾಲೇಜಿನಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಕೌಶಲ ತರಬೇತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳ ಉಜ್ವಲ ಭವಿಷ್ಯದ ಉದ್ದೇಶದಿಂದ ಅನೇಕ ಕಾರ್ಯಕ್ರಮ ಹಮಿಕೊಂಡಿದ್ದು, ಅದರ ಪ್ರಯೋಜನವನ್ನು ಪ್ರತಿಯೊಬ್ಬ ವಿದ್ಯಾರ್ಥಿ ಪಡೆಯಬೇಕು ಎಂದು ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಜಗದೀಶ್ ಚೌಡುವಳ್ಳಿ ಸಲಹೆ ನೀಡಿದರು.

ಮಲೆನಾಡು ಇಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ಏರ್ಪಡಿಸಿದ್ದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಕೌಶಲ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾಲೇಜು ದೇಶಾದ್ಯಂತ ಉತ್ತಮ ಹೆಸರು ಪಡೆದಿದೆ. ಇಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನ ಒಳಗೊಂಡಂತೆ ನುರಿತ ಉಪನ್ಯಾಸಕರು




ಇದ್ದಾರೆ. ಜೊತೆಗೆ ವಿದ್ಯಾರ್ಥಿಗಳಿಗೆ ಹಲವಾರು ವಿಷಯಗಳನ್ನು ಮನದಟ್ಟು ಮಾಡಲು ವಿಷಯ ತಜ್ಞರನ್ನ ಕರೆಸಿ ಮಾರ್ಗದರ್ಶನ ನೀಡಲಾಗುತ್ತಿದೆ. ವಿಷಯವಾರು ಸಾಮಾಜಿಕ ಜ್ಞಾನ, ತಿಳಿವಳಿಕೆ ಮೂಡಿಸುವ ಕಾರ್ಯಕ್ರಮ ಹಮಿಕೊಳ್ಳಲಾಗಿದೆ ಎಂದರು.

ವ್ಯಾಸಂಗ ಪೂರ್ಣಗೊಳಿಸುವ ವಿದ್ಯಾರ್ಥಿಗಳ ಉಜ್ವಲ ಭವಿಷ್ಯದ ದೃಷ್ಟಿಯಿಂದ ಪ್ರತಿಷ್ಠಿತ ಕಂಪನಿಗಳನ್ನು ಕರೆಸಿ ಉದ್ಯೋಗ ಕಲ್ಪಿಸಿಕೊಡಲಾಗುತ್ತಿದೆ. ಕ್ಯಾಂಪಸ್ ಸೆಲೆಕ್ಷನ್ ಮೂಲಕ ಅನೇಕ ವಿದ್ಯಾರ್ಥಿಗಳು ಬದುಕು ಕಟ್ಟಿಕೊಂಡಿದ್ದಾರೆ. ಮಕ್ಕಳಿಗೆ ಒಳ್ಳೆಯ ಬದುಕು ಕಟ್ಟಿಕೊಡುವುದು ಸಂಸ್ಥೆಯ ಧ್ಯೇಯ ಎಂದರು.

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಪ್ರಮುಖ್ ಎಂ.ಎನ್. ಕಾಂತರಾಜ್ ಅವರು ಮಾತನಾಡಿ,

### ವಿದ್ಯಾರ್ಥಿಗಳು ರಾಷ್ಟ್ರ ಪ್ರೇಮ ಬೆಳೆಸಿಕೊಳ್ಳಬೇಕು

ಬೆಂಗಳೂರಿನ ಸಂವಾದ ಫೌಂಡೇಶನ್ ಟ್ರಸ್ಟ್ ನಿರ್ದೇಶಕ ರಾಧಾಕೃಷ್ಣ ಹೊಳ್ಳ ಮಾತನಾಡಿ, ವಿದ್ಯಾರ್ಥಿಗಳು ವ್ಯಾಸಂಗದ ಅವಧಿಯಲ್ಲಿ ಗಮನವಿಟ್ಟು ಪಾಠ ಕೇಳಬೇಕು. ಅಂಕ ಗಳಿಕೆಗಾಗಿ ಪಠ್ಯ ಪುಸ್ತಕ ಓದದೆ ಆಳವಾಗಿ ಅರಿತರೆ ನೆನಪಿನಲ್ಲಿ ಉಳಿಯುತ್ತದೆ. ಯುವ ಸಮುದಾಯ ಪ್ರಗತಿಪರ ಚಿಂತನೆಯ ಹಾದಿಯಲ್ಲಿ ತೊಡಗಿಸಿಕೊಳ್ಳಬೇಕು. ಯುವಕರು ದೇಶದ ಅಭಿವೃದ್ಧಿಗೆ ತಮ ಕೈಲಾದ ಸಹಾಯ ಮಾಡಬೇಕು. ನಮ ಸಂಸ್ಕೃತಿ, ಆಚಾರ ವಿಚಾರ, ನಮ್ಮ ಧರ್ಮ ಜಾಗೃತಿಗೆ ದಾರಿದೀಪ ವಾಗಬೇಕು ಎಂದರು.

ದೇಶದ ಯಾವುದೇ ಮೂಲೆಯಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾದರೆ ಎಬಿವಿಪಿ ನೆರವಿಗೆ ನಿಲ್ಲುತ್ತದೆ. ಸರ್ಕಾರದ ಅವೈಜ್ಞಾನಿಕ ನಿರ್ಧಾರಗಳ ವಿರುದ್ಧ ಪ್ರಬಲ ಹೋರಾಟ ರೂಪಿಸಿ ಎಚ್ಚರಿಸುವ ಕೆಲಸ ಮಾಡುತ್ತದೆ ಎಂದರು.

ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ. ಇಂದ್ರ ಬಹೂದ್ದೂರು ಮಾತನಾಡಿ, ವಿದ್ಯಾರ್ಥಿಗಳ ಜೀವನ ಸುಗಮವಾಗಬೇಕಾದರೆ ಅವರಿಗೆ ಉತ್ತಮ ವಿದ್ಯಾಭ್ಯಾಸ ನೀಡಬೇಕು. ಜ್ಞಾನಾರ್ಜನೆಗೆ ಅಗತ್ಯ ಸಹಕಾರ ನೀಡಬೇಕು. ಆ ಕೆಲಸವನ್ನು ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ ಅಚ್ಚುಕಟ್ಟಾಗಿ ಮಾಡುತ್ತಿದೆ ಎಂದು ಹೇಳಿದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಮಾಧ್ಯಮ ಸಂಯೋಜಕ ಕಟ್ಟಾಯ ಶಿವಕುಮಾರ್ ಮಾತನಾಡಿ, ವಿದ್ಯಾರ್ಥಿಗಳ ಅನುಕೂಲತೆಗಾಗಿ ಕಾಲೇಜಿನ ಆಡಳಿತ ಮಂಡಳಿ ಸಾಕಷ್ಟು ಬದಲಾವಣೆ ತಂದಿದೆ. ಕಾಲೇಜು ಕ್ಯಾಂಪಸ್ ಅಭಿವೃದ್ಧಿ ಮಾಡಿರುವ ಜೊತೆಗೆ ಅತ್ಯುತ್ತಮ ಉಪನ್ಯಾಸಕರ ನೇಮಕ ಮಾಡಿಕೊಳ್ಳಲಾಗಿದೆ. ಪರಿಣಾಮಕಾರಿ ಪಾಠ ಪ್ರವಚನಗಳನ್ನು ಕೊಡಿಸುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಹೆಚ್ಚಿನ ರೀತಿಯ ಸಹಕಾರ ನೀಡಿದೆ ಎಂದರು.

ಗಣಿತ ವಿಭಾಗದ ಮುಖ್ಯಸ್ಥೆ ಕಲಾವತಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಂಯೋಜಕ ಪ್ರಾಧ್ಯಾಪಕ ಮೋಹನ್, ಕಾರ್ಯಕ್ರಮ ಸಂಯೋಜಕರಾದ ದೀಕ್ಷಿತ್, ಮೋಕ್ಷಿತಾ ಇತರರಿದ್ದರು. ಪ್ರಥಮ ವರ್ಷದ ಒಂದು ಸಾವಿರ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದ ದಂಪತಿ ಅದಾಲತ್‌ನಲ್ಲಿ ಜೊತೆಯಾದರು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ವೈವಾಹಿಕ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದ ದಂಪತಿಗಳು ಲೋಕ ಅದಾಲತ್‌ನಲ್ಲಿ ಮತ್ತೆ ಒಂದಾದ ಪ್ರಕರಣ ಪಟ್ಟಣದ ನ್ಯಾಯಾಲಯದಲ್ಲಿ ಶನಿವಾರ ನಡೆಯಿತು.

ತಾಲ್ಲೂಕಿನ ಸೋಂಪುರ ಗ್ರಾಮದ ಸಿ. ಜ್ಯೋತಿ ಮತ್ತು ಸಾಲಿಗ್ರಾಮ ತಾಲ್ಲೂಕು ದಿಡ್ಡಹಳ್ಳಿ ಗ್ರಾಮದ ಡಿ. ಯೋಗೇಶ್ ದಂಪತಿ ದಾಂಪತ್ಯದಲ್ಲಿನ ಭಿನ್ನಾಭಿಪ್ರಾಯದಿಂದ ಮೂರು ವರ್ಷಗಳ ಹಿಂದೆ ವಿಚ್ಛೇದನ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು ಪ್ರಕರಣ ನಡೆಯುತ್ತಿತ್ತು.

ಶನಿವಾರ ನಡೆದ ಲೋಕ ಅದಾಲತ್‌ನಲ್ಲಿ ಹಿರಿಯ ಶ್ರೇಣಿ ನ್ಯಾಯಾಧೀಶ ಬಿ.ಕೆ. ನಾಗೇಶ್ ಮೂರ್ತಿ ದಂಪತಿಗೆ ತಿಳಿವಳಿಕೆ ಹೇಳಿ ರಾಜೀ ಸಂಧಾನದ ಮೂಲಕ ದಂಪತಿಗಳನ್ನು ಮತ್ತೆ ಒಂದು ಗೂಡಿಸಿದರು.

ದಂಪತಿಗಳಿಂದ ಪರಸ್ಪರ ಹಾರ ಬದಲಿಸಿ ಶುಭ ಕೋರಲಾಯಿತು. ಸುದ್ದಿಗಾರರೊಂದಿಗೆ ಮಾತನಾಡಿದ ನ್ಯಾಯಾಧೀಶ ನಾಗೇಶ್ ಮೂರ್ತಿ ಅವರು, ದಂಪತಿಗಳಲ್ಲಿ ಸಾಮರಸ್ಯ ಮುಖ್ಯ, ಕುಟುಂಬ ಚೆನ್ನಾಗಿದ್ದರೆ ಸಮಾಜ ಸುಭದ್ರವಾಗಿರುತ್ತದೆ. ಈ ಪ್ರಕರಣ ವಿಚ್ಛೇಧನ ಕೋರಿ ಅರ್ಜಿ ಸಲ್ಲಿಸಿರುವ ದಂಪತಿಗಳಿಗೆ ಅನುಕರಣೀಯ ವಾಗಬೇಕು, ದಂಪತಿಗಳು ಅನ್ಯೋನ್ಯದಿಂದ ಬಾಳುವೆ ನಡೆಸುವಂತೆ ಹಾರೈಸಿದರು.

ವಕೀಲರಾದ ಪಿ.ಎಸ್. ಗುರುಪ್ರಸಾದ್, ಎ.ಎಸ್. ಮಧು, ಕಿರಣ್ ಕುಮಾರ್, ಶಂಕರಯ್ಯ, ಗಣೇಶ್ ಶೆಟ್ಟಿ, ಬಿ.ಎಂ. ಮಹೇಶ್, ಪ್ರಶಾಂತ್ ಉಪಸ್ಥಿತರಿದ್ದರು.

235 ಪ್ರಕರಣ ಇತ್ಯರ್ಥ: ಪಟ್ಟಣದ ನಾಲ್ಕು ನ್ಯಾಯಾಲಯಗಳಲ್ಲಿ 9157 ಪ್ರಕರಣಗಳು ಇದ್ದು ಶನಿವಾರ ನಡೆದ ಲೋಕ ಅದಾಲತ್ ಮುಂದೆ 549 ಪ್ರಕರಣಗಳನ್ನು ಇಡಲಾಗಿತ್ತು. 235 ಪ್ರಕರಣಗಳನ್ನು ರಾಜೀ ಸಂದಾನದ ಮೂಲಕ ಇತ್ಯರ್ಥ ಗೊಳಿಸಲಾಯಿತು.

# ಅಂಗನವಾಡಿ ನೌಕರರ ಬೇಡಿಕೆ ಈಡೇರಿಕೆಗೆ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಂಗನವಾಡಿ ನೌಕರರ ವಿವಿಧ ಸಮಸ್ಯೆಗಳ ಕುರಿತು ವಿಧಾನಸಭಾ ಅಧಿವೇಶನದಲ್ಲಿ ಚರ್ಚೆ ಮಾಡಿ ಪರಿಹಾರ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು) ತಾಲ್ಲೂಕು ಸಮಿತಿ ವತಿಯಿಂದ ಶಾಸಕ ಹೆಚ್.ಪಿ.ಸ್ವರೂಪ್ ಅವರಿಗೆ ಶನಿವಾರ ಮನವಿ ಸಲ್ಲಿಸಲಾಯಿತು.

ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐಸಿಡಿಎಸ್) ಆರಂಭವಾಗಿ 50 ವರ್ಷಗಳಾಗಿದ್ದು, 6 ವರ್ಷದೊಳಗಿನ ಮಕ್ಕಳ ಪೋಷಣೆ, ಆರೋಗ್ಯ ಹಾಗೂ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಅಂಗನವಾಡಿ ಕೇಂದ್ರಗಳ ಮೂಲಕ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಪರಿಣಾಮಕಾರಿಯಾಗಿ ಜಾರಿಗೆ ತರುತ್ತಿದ್ದಾರೆ. ಸುಪ್ರೀಂ ಕೋರ್ಟ್



ಹಾಗೂ ಗುಜರಾತ್ ಹೈಕೋರ್ಟ್ ತೀರ್ಪುಗಳ ಪ್ರಕಾರ ಅಂಗನವಾಡಿ ನೌಕರರನ್ನು 3 ಮತ್ತು 4ನೇ ದರ್ಜೆ ನೌಕರರಾಗಿ ಪರಿಗಣಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಗಿದೆ. ರಾಜ್ಯದಲ್ಲಿ ಶಾಲೆಗಳಲ್ಲಿ ಎಲ್‌ಕೆಜಿ-ಯುಕೆಜಿ ಆರಂಭಿಸುವ ಮೂಲಕ ಅಂಗನವಾಡಿ ಕೇಂದ್ರಗಳಲ್ಲಿರುವ ಮಕ್ಕಳನ್ನು ಸ್ಥಳಾಂತರಿಸುವ ಪ್ರಯತ್ನಗಳು ನಡೆಯುತ್ತಿದ್ದು, ಇದರಿಂದ ಐಸಿಡಿಎಸ್ ಯೋಜನೆ ದುರ್ಬಲಗೊಳ್ಳುವ ಆತಂಕವಿದೆ ಎಂದರು.

ಎಲ್ಲ ಅಂಗನವಾಡಿ ಕೇಂದ್ರಗಳಲ್ಲಿಯೂ ಎಲ್‌ಕೆಜಿ-ಯುಕೆಜಿ ಆರಂಭಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಅಂಗನವಾಡಿ ನೌಕರರನ್ನು ಕನಿಷ್ಠ ವೇತನ ಕಾಯ್ದೆಯ ವ್ಯಾಪ್ತಿಗೆ ತಂದು ಇಎಸ್‌ಐ, ಪಿಎಫ್ ಸೌಲಭ್ಯ ನೀಡಬೇಕು, ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿ ಹುದ್ದೆ ಭರ್ತಿ ಮಾಡಬೇಕು. ನಿವೃತ್ತರಾದವರಿಗೆ ಗ್ರಾಚ್ಯುಟಿ ಬಿಡುಗಡೆ ಮಾಡಬೇಕು. ಆರೋಗ್ಯ ವಿಮೆ ಜಾರಿ ಮಾಡಬೇಕು ಹಾಗೂ ಗೌರವಧನ ಹೆಚ್ಚಳ ಮಾಡಬೇಕು ಎಂದು ಆಗ್ರಹಿಸಿದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮಾ. 23ರಿಂದ ಬೆಂಗಳೂರಿನಲ್ಲಿ ಅನಿರ್ದಿಷ್ಟ ಹೋರಾಟ ಆರಂಭಿಸುವುದಾಗಿ ಸಂಘದ ಮುಖಂಡರು ಎಚ್ಚರಿಕೆ ನೀಡಿದರು.

ಸಂಘದ ತಾಲ್ಲೂಕು ಅಧ್ಯಕ್ಷೆ ಟಿ.ಹೆಚ್. ಜಯಂತಿ, ಖಜಾಂಚಿ ಮೀನಾಕ್ಷಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ. ಪುಷ್ಪ, ತಾಲೂಕು ಮುಖಂಡರಾದ ದ್ರಾಕ್ಷಾಯಿಣಿ, ಗಾಯತ್ರಿ, ಸಿಐಟಿಯು ಖಜಾಂಚಿ ಅರವಿಂದ್ ಇತರರಿದ್ದರು.

# ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಯುದ್ಧದ ಪರಿಣಾಮ ಆಮದಾಗುವ ಕಚ್ಚಾ ತೈಲ ಕಡಿತಗೊಂಡು ದೇಶದ ಪರಿಸ್ಥಿತಿ ಗಂಭೀರವಾಗಿದ್ದರೂ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಸಂಸದರೊಂದಿಗೆ ಹರಟೆ ಹೊಡೆದು ಸಮಯ ವ್ಯರ್ಥ ಮಾಡಿದ್ದನ್ನು ಖಂಡಿಸಿ ಬಿಜೆಪಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾ ಬಿಜೆಪಿ ಕಚೇರಿ ಎದುರು ಪ್ರತಿಭಟನೆ ನಡೆಸಿದ ಪಕ್ಷದ ಕಾರ್ಯಕರ್ತರು ರಾಹುಲ್ ಗಾಂಧಿ ವಿರುದ್ಧ ಘೋಷಣೆ ಕೂಗಿದರು. ಯುದ್ಧದಿಂದಾಗಿ ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲ ಹಾಗೂ ಇಂಧನ ಸರಬರಾಜಿಗೆ ಅಡೆತಡೆ ಉಂಟಾಗಿದೆ. ದೇಶದ ಆರ್ಥಿಕ ಪರಿಸ್ಥಿತಿ ಹಾಗೂ ಇಂಧನ ಪೂರೈಕೆ ಕುರಿತು ಗಂಭೀರ ಚರ್ಚೆ ನಡೆಯುತ್ತಿವೆ. ಈ ವೇಳೆ ಪ್ರತಿಪಕ್ಷ ನಾಯಕರು ಜವಾಬ್ದಾರಿಯುತವಾಗಿ




ನಡೆದುಕೊಳ್ಳಬೇಕು. ಆದರೆ ಅವರ ಲಘು ವರ್ತನೆ ಖಂಡನಾರ್ಹ ಎಂದರು.

ಬಿಜೆಪಿ ನಗರಾಧ್ಯಕ್ಷ ಯೋಗೀಶ್‌ಗೌಡ ಮತ್ತು ಮಾಧ್ಯಮ ಪ್ರಮುಖ್ ವೇದಾವತಿ ಮಾತನಾಡಿ, ಯುದ್ಧದಿಂದಾಗಿ ಕಚ್ಚಾ ತೈಲಕ್ಕೆ ಪರದಾಡುವಂತಾಗಿದೆ. ಕೇಂದ್ರ ಸರ್ಕಾರ ದೇಶದಲ್ಲಿ ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ಪೂರೈಕೆಯಲ್ಲಿ ಕೊರತೆ ಆಗದಂತೆ ಕ್ರಮ ಕೈಗೊಂಡಿದೆ. ಕೇಂದ್ರ ಸರ್ಕಾರ ಸಮರ್ಪಕ ಕ್ರಮ ಕೈಗೊಂಡಿರುವುದರಿಂದ ಸಾಮಾನ್ಯ ಜನರಿಗೆ ಹೆಚ್ಚಿನ ತೊಂದರೆ ಆಗದಂತೆ ವ್ಯವಸ್ಥೆ ಮಾಡಲಾಗಿದೆ. ಆದರೂ ಇಂತಹ ಸಮಯದಲ್ಲಿ ರಾಹುಲ್‌ಗಾಂಧಿ ಅವರು ರಾಷ್ಟ್ರದ ಪರಿಸ್ಥಿತಿ ಬಗ್ಗೆ ಗಂಭೀರವಾಗಿ ಚಿಂತಿಸುವ ಬದಲು ತಮ ಸಂಸದರೊಂದಿಗೆ ರಾಜಕೀಯ ಚರ್ಚೆಗಳಲ್ಲಿ ಕಾಲ ಕಳೆಯುತ್ತಿದ್ದಾರೆ ಎಂದು ಆರೋಪಿಸಿದರು.

ದೇಶದ ಸಂಕಷ್ಟದ ಸಂದರ್ಭಗಳಲ್ಲಿ ಪ್ರತಿಪಕ್ಷಗಳು ಸರ್ಕಾರದ ವಿರುದ್ಧ ರಾಜಕೀಯ ಆರೋಪ ಮಾಡುವುದಕ್ಕಿಂತ ರಾಷ್ಟ್ರದ ಹಿತದೃಷ್ಟಿಯಿಂದ ಸಹಕಾರ ನೀಡಬೇಕು ಎಂದು ಹೇಳಿದರು.

ಎಲ್ಲ ವಿಚಾರಗಳಲ್ಲೂ ಪ್ರತಿಪಕ್ಷ ನಾಯಕರು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು. ಅನಗತ್ಯ ಆರೋಪ ಹಾಗೂ ದೇಶದ ಹಿತಾಸಕ್ತಿಗೆ ಧಕ್ಕೆಯುಂಟುಮಾಡುವ ಹೇಳಿಕೆ ನೀಡುವುದು ಸರಿಯಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಇಂತಹ ಹೇಳಿಕೆಗಳು ದೇಶದ ಚಿತ್ರಣಕ್ಕೂ ಹಾನಿ ಉಂಟುಮಾಡಬಹುದು ಎಂದು ಅಭಿಪ್ರಾಯಪಟ್ಟರು. ಇದೇ ವೇಳೆ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೂ ಬಿಜೆಪಿ ಕಾರ್ಯಕರ್ತರು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಿರೀಶ್ ನಂಬಿಹಳ್ಳಿ, ಜಿಲ್ಲಾ ವಕ್ತಾರ ಮೋಹನ್ ಕುಮಾರ್, ಮಂಡಲ ಪ್ರಧಾನ ಕಾರ್ಯದರ್ಶಿ ರಾಜೀವ್, ವಿಶಾಲಾಕ್ಷಿ ಇತರರಿದ್ದರು.

# ಅಂಗನವಾಡಿಗಳಿಗೆ ಅಗತ್ಯ ಸೌಲಭ್ಯ ಒದಗಿಸುವ ಭರವಸೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಅಂಗನವಾಡಿಗಳಿಗೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಶಕ್ತಿಮೀರಿದ ಪ್ರಯತ್ನ ಮಾಡಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಪುರಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಂಗನವಾಡಿಗಳಿಗೆ ಟಿವಿ, ಭಾಗ್ಯಲಕ್ಷ್ಮಿ ಯೋಜನೆಯ ಬಾಂಡ್ ಹಾಗೂ ಕುಡಿಯುವ ನೀರಿನ ಶುದ್ಧೀಕರಣ ಫಿಲ್ಟರ್‌ಗಳನ್ನು ವಿತರಿಸಿ ಮಾತನಾಡಿದ ಅವರು, ತಾಲೂಕಿನ ಸುಮಾರು 107 ಅಂಗನವಾಡಿಗಳಿಗೆ ಟಿವಿ ವಿತರಿಸುವ ಕಾರ್ಯಕ್ರಮ ಹಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಇದರ ಜೊತೆಗೆ ಬಡ ಕುಟುಂಬಗಳಲ್ಲಿ ಜನಿಸಿದ ಹೆಣ್ಣುಮಕ್ಕಳ ಭವಿಷ್ಯ ಭದ್ರತೆಗಾಗಿ 2006ರಲ್ಲಿ ಜಾರಿಗೆ ಬಂದ ಭಾಗ್ಯಲಕ್ಷ್ಮಿ ಯೋಜನೆಯಡಿ ಬಾಂಡ್‌ಗಳನ್ನು ವಿತರಿಸಲಾಗುತ್ತಿದೆ. ಒಂದು ಕುಟುಂಬದಲ್ಲಿ ಎರಡು ಹೆಣ್ಣುಮಕ್ಕಳಿದ್ದರೆ, ಅವರಿಗೆ 18 ವರ್ಷ ಪೂರ್ತಿಯಾದ ಬಳಿಕ ಮೆಚ್ಯೂರಿಟಿ ಮೊತ್ತ ದೊರೆಯುವಂತೆ ಈ ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

ಸರ್ಕಾರದ ವತಿಯಿಂದ ದೊರೆತಿರುವ ಶುದ್ಧ ಕುಡಿಯುವ ನೀರಿನ ಫಿಲ್ಟರ್‌ಗಳನ್ನು ಕೂಡ ಅಂಗನವಾಡಿಗಳಿಗೆ ವಿತರಿಸಲಾಗುತ್ತಿದೆ. ಮಕ್ಕಳಿಗೆ ಶುದ್ಧ ಕುಡಿಯುವ ನೀರು ಲಭ್ಯವಾಗುವಂತೆ ಮಾಡುವುದು ಇದರ ಉದ್ದೇಶವಾಗಿದೆ ಎಂದು ತಿಳಿಸಿದರು. ಕಳೆದ ಬಾರಿ ಅಂಗನವಾಡಿಗಳ ಮೂಲಭೂತ ಸೌಕರ್ಯಗಳ ಕುರಿತು ಮಾಹಿತಿ ಸಂಗ್ರಹಿಸಲಾಗಿತ್ತು. ಈಗಲೂ ಎಲ್ಲೆಲ್ಲಿ ವಿದ್ಯುತ್ ಸಮಸ್ಯೆ ಇದೆ ಎಂಬುದರ ಮಾಹಿತಿ ನೀಡಿದರೆ ತಕ್ಷಣವೇ ಅದನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ನಮ ಭಾಗದಲ್ಲಿ ಹೆಚ್ಚಾಗಿ ಸುರಿಯುವ ಮಳೆಯ ಪರಿಣಾಮ ಕೆಲವು ಅಂಗನವಾಡಿ ಕಟ್ಟಡಗಳಿಗೆ ಹಾನಿಯಾಗಿದೆ ಎಂಬುದು ಗಮನಕ್ಕೆ ಬಂದಿದೆ. ಅವುಗಳನ್ನು ಹಂತ ಹಂತವಾಗಿ ದುರಸ್ತಿ ಮಾಡುವ ಕಾರ್ಯ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಅಂಗನವಾಡಿಗೆ ಬರುವ ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಪೌಷ್ಟಿಕ ಆಹಾರ ದೊರೆಯಬೇಕು. ಅವರ ಆರೋಗ್ಯ ಹಾಗೂ ದೈಹಿಕ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಅಗತ್ಯವಿರುವ ಎಲ್ಲಾ ಸೌಲಭ್ಯ ಒದಗಿಸುವುದು ನಮ ಉದ್ದೇಶವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಿಡಿಪಿಒ ಇಂದಿರಾ, ಸಿಐಟಿಯು ಸಂಘಟನೆಯ ಹೇಮಾ, ಸುಮಿತ್ರಾ, ಅಂಗನವಾಡಿ ಮೇಲ್ವಿಚಾರಕಿ ಜ್ಯೋತಿ, ಪುರಸಭೆ ಮಾಜಿ ಸದಸ್ಯೆ ವನಜಾಕ್ಷಿ ಸೇರಿ ವಿವಿಧ ಸಂಘಟನೆಗಳ ಮುಖಂಡರು, ಸದಸ್ಯರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ಹಣ್ಣುಗಳ ಅಂಗಡಿಗೆ ಆಹಾರ ಸುರಕ್ಷತಾಧಿಕಾರಿಗಳ ಭೇಟಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬೇಸಿಗೆ ಅವಧಿಯಲ್ಲಿ ಹಣ್ಣುಗಳಿಗೆ ಬೇಡಿಕೆ ಹೆಚ್ಚಿದ್ದು, ಗುಣಮಟ್ಟದ ಪದಾರ್ಥ ಮಾರಾಟಕ್ಕೆ ಆದ್ಯತೆ ನೀಡಬೇಕೆಂದು ಆಹಾರ ಸುರಕ್ಷತಾ ಅಧಿಕಾರಿ ಕೆ.ವಿನಯ್ ಸೂಚನೆ ನೀಡಿದರು.

ಪಟ್ಟಣದ ವಿವಿಧ ಹಣ್ಣು ಮಾರಾಟ ಕೇಂದ್ರ ಹಾಗು ಬೀದಿ ಬದಿ ಹಣ್ಣು ವ್ಯಾಪಾರ ಸ್ಥಳಗಳಿಗೆ ಶನಿವಾರ ಭೇಟಿ ನೀಡಿದ ಅವರು, ಬೇಸಿಗೆ ಕಾಲವಾಗಿರುವುದರಿಂದ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ವ್ಯಾಪಾರಿಗಳು ಎಚ್ಚರಿಕೆ ವಹಿಸಬೇಕು. ಬಿಸಿಲ ತಾಪದಿಂದ ಪಾರಾಗಲು ಸಾರ್ವಜನಿಕರು ಹೆಚ್ಚಿನ ಪ್ರಮಾಣದಲ್ಲಿ ಹಣ್ಣುಗಳನ್ನು ಖರೀದಿಸುತ್ತಾರೆ. ಗುಣಮಟ್ಟದ ಹಾಗೂ ಶುಚಿತ್ವಯುತ ಹಣ್ಣುಗಳನ್ನು ಮಾತ್ರ ಮಾರಾಟ ಮಾಡಬೇಕೆಂದು ನಿರ್ದೇಶನ ನೀಡಿದರು.

ಹಣ್ಣುಗಳನ್ನು ಸ್ವಚ್ಛವಾದ ಸ್ಥಳದಲ್ಲಿ ಇಟ್ಟು ಮಾರಾಟ ಮಾಡಬೇಕು, ಧೂಳು-ಕಸದಿಂದ ದೂರ ಇರಿಸಬೇಕು, ಕತ್ತರಿಸಿದ ಹಣ್ಣುಗಳನ್ನು ಮುಚ್ಚಿರಬೇಕು. ಗ್ರಾಹಕರಿಗೆ ಆರೋಗ್ಯಕರ ಆಹಾರ ದೊರೆಯುವಂತೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಲಾಯಿತು.

ಜೊತೆಗೆ ಬಳಕೆಯ ಪಾತ್ರೆ, ಚಾಕು ಮತ್ತು ಮಾರಾಟ ಸ್ಥಳವನ್ನು ಸ್ವಚ್ಛವಾಗಿರಿಸುವುದು ಅಗತ್ಯ. ನಿಯಮ ಉಲ್ಲಂಘನೆ ಕಂಡು ಬಂದರೆ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಸಿದರು.

ಇದೇ ಸಂದರ್ಭದಲ್ಲಿ ಇಲಾಖೆಯ ಆದೇಶದ ಮೇರೆಗೆ ಕಲ್ಲಂಗಡಿ ಹಣ್ಣುಗಳ ಗುಣಮಟ್ಟ ಪರೀಕ್ಷೆಗಾಗಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಯಿತು. ಬೀದಿ ಬದಿ ಹಣ್ಣು ಮಾರಾಟ ಮಾಡುವ ವ್ಯಾಪಾರಸ್ಥರಿಗೆ ಅರಿವು ಮೂಡಿಸಲಾಯಿತು.

ಸಾರ್ವಜನಿಕ ಆಸ್ಪತ್ರೆ ಆರೋಗ್ಯ ನಿರೀಕ್ಷಣಾಧಿಕಾರಿ ಜೆ.ಟಿ.ಸ್ವಾಮಿ ಮತ್ತಿತರರಿದ್ದರು.

# ಮಾ. 17ಕ್ಕೆ ಮಹಿಳಾ ದಿನಾಚರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಮಾ. 17ರಂದು ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಮಹಿಳಾ ನೌಕರರಿಗಾಗಿ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆ ಆಯೋಜಿಸಲಾಗಿದೆ ಎಂದು ತಾಲ್ಲೂಕು ಅಧ್ಯಕ್ಷ ಶಾಂತ ತಿಳಿಸಿದ್ದಾರೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಧ್ಯಾಹ್ನ 1 ಗಂಟೆಯಿಂದ ಮಹಿಳಾ ನೌಕರರಿಗಾಗಿ ವಿವಿಧ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ




ಸ್ಪರ್ಧೆಗಳು ನಡೆಯಲಿವೆ. ಸಂಜೆ 4 ಗಂಟೆಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳಾ ನೌಕರರಿಗೆ ಸಾಧನ ಪುರಸ್ಕಾರ ಪ್ರದಾನ ಕಾರ್ಯಕ್ರಮ ಹಮಿಕೊಳ್ಳಲಾಗಿದೆ ಎಂದು ಹೇಳಿದರು.

ಮಹಿಳೆಯರಲ್ಲಿ ಕ್ರೀಡಾ ಮನೋಭಾವ ಬೆಳೆಸುವುದು ಹಾಗೂ ಅವರಲ್ಲಿರುವ ಪ್ರತಿಭೆಯನ್ನು ಉತ್ತೇಜಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ತಮಣ್ಣ ಶೆಟ್ಟಿ, ಕಾರ್ಯದರ್ಶಿ ಎನ್.ಜಗದೀಶ್, ಸಂಘಟನಾ ಕಾರ್ಯದರ್ಶಿ ವೆಂಕಟೇಶ್, ನಿರ್ದೇಶಕ ಸಲೀಂ ಹಾಗೂ ಇತರರಿದ್ದರು.

# ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಹೆಚ್ಚು




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಕುಟುಂಬದ ಜವಾಬ್ದಾರಿ ಹಾಗೂ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ ಎಂದು ಸಂಪನೂಲ ವ್ಯಕ್ತಿ ಡಾ. ಭಾರತಿ ರವೀಂದ್ರನಾಥ್ ಹೇಳಿದರು.

ಪಟ್ಟಣದ ಎಸ್ ಬಿಜಿ ಕಲ್ಯಾಣ ಮಂಟಪದಲ್ಲಿ ಬದುಕು ಫೌಂಡೇಶನ್ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ರಾಜಕೀಯ, ಹೈನುಗಾರಿಕೆ, ಶಿಕ್ಷಣ, ವಿಜ್ಞಾನ, ಕೃಷಿ ಹಾಗೂ ಸಮಾಜ ಸೇವೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಕಾರ್ಯವೈಖರಿ ಶ್ಲಾಘನೀಯವಾದುದು. ಕುಟುಂಬ ನಿರ್ವಹಣೆಯಷ್ಟೇ ಅಲ್ಲದೆ ಮನೆಯಿಂದ ಹೊರ ಜಗತ್ತಿನಲ್ಲಿಯೂ ಸಾಧಿಸಬಲ್ಲಳು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಹಿಳೆಯರು ಇತ್ತೀಚಿನ ದಿನಗಳಲ್ಲಿ ವಿವಿಧ ಬಗೆಯ ಕ್ಯಾನ್ಸರ್ ಖಾಯಿಲೆಗೆ ತುತ್ತಾಗುತ್ತಿದ್ದಾರೆ. ಕ್ಯಾನ್ಸರ್ ಕಾಣಿಸಿಕೊಂಡರೆ ಭಯಪಡುವ ಅಗತ್ಯವಿಲ್ಲ. ಕ್ಯಾನ್ಸರ್ ಲಕ್ಷಣಗಳು ಕಂಡ ತಕ್ಷಣ ವೈದ್ಯರ ಬಳಿ ತೆರಳಿದರೆ ಗುಣಪಡಿಸಬಹುದು ಎಂದರು.

ಆಹಾರ ಪದ್ಧತಿ ಹಾಗು ಜೀವನ ಶೈಲಿ ಬದಲಾವಣೆಯು ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ ಎಂದರು.

# ಕಣ್ಣನ ಸೆಳೆದ ಮೇಲುಕೋಟೆ ಚೆಲುವನಾರಾಯಣಸ್ವಾಮಿ ದೇವಸ್ಥಾನ

ಗೊರೂರು ಅನಂತರಾಜು

12ನೇ ಶತಮಾನದಲ್ಲಿ ಶ್ರೀ ರಾಮಾನುಜಾಚಾರ್ಯರು ನೆಲೆಸಿದ್ದ ಮೇಲುಕೋಟೆಸ್ಥಳವು ಚೆಲುವನಾರಾಯಣಸ್ವಾಮಿ ದೇವಾಲಯ, ಯೋಗನರಸಿಂಹಸ್ವಾಮಿ ದೇವಾಲಯ, ಕಲ್ಯಾಣಿ ಮತ್ತು ವೈರಮುಡಿ ಉತ್ಸವಕ್ಕೆ ಹೆಸರಾಗಿದೆ. 3589 ಅಡಿ ಎತ್ತರದ ಯದುಗಿರಿ ಬೆಟ್ಟದ ಮೇಲಿರುವ ಇದು ರಾಯಗೋಪುರ, ಪಂಚಕಲ್ಯಾಣಿ, ಅಕ್ಕತಂಗಿಯರ ಕೊಳ, ಧನುಷ್ಕೋಟಿ ಇರುವ ಧಾರ್ಮಿಕ ಕ್ಷೇತ್ರ. ಮೇಲುಕೋಟೆಗೆ ಯಾದವಾದ್ರಿ, ವೇದಾದ್ರಿ, ನಾರಾಯಣಾದ್ರಿ, ಯತಿಶೈಲ, ಯದುಗಿರಿ ಎಂಬ ಹೆಸರುಗಳಿವೆ. ಶಾಸನಗಳಲ್ಲಿ ಯಾದವಗಿರಿ, ಯದುಗಿರಿ, ವೈಕುಂಠವರ್ಧನ ಕ್ಷೇತ್ರ, ದಕ್ಷಿಣ ಬದರಿಕಾಶ್ರಮ, ತಿರುನಾರಾಯಣಪುರ, ಮೇಲುಕೋಟೆ ಹೆಸರಿನ ಉಲ್ಲೇಖವಿದೆ. 1189ರಲ್ಲಿ ಕೋಟೆ ಇದ್ದ ಬಗ್ಗೆ ಆಧಾರಗಳು ದೊರೆತಿವೆ. ಹೋಬಳಿ ಕೇಂದ್ರವಾದ ಇದು ಹೊಯ್ಸಳರ ವಿಷ್ಣುವರ್ಧನ (ಕ್ರಿ.ಶ.1008-1148) ಕಾಲದಿಂದ ಮೈಸೂರು ಅರಸರ ಕಾಲದವರೆಗೆ ರಾಜಾಶ್ರಯ ಪಡೆದಿತ್ತು. ಶ್ರೀ ರಾಮಾನುಜಾಚಾರ್ಯರು ಈ ಸ್ಥಳಕ್ಕೆ ಬರುವ ಮೊದಲೇ ಇಲ್ಲಿ ಚೆಲುವನಾರಾಯಣಸ್ವಾಮಿ ಮತ್ತು ಯೋಗನರಸಿಂಹಸ್ವಾಮಿ ದೇವಸ್ಥಾನಗಳಿದ್ದವು. ಶ್ರೀರಾಮಾನುಜಾಚಾರ್ಯರು 14 ವರ್ಷ ಇಲ್ಲಿ ವಾಸಿಸುತ್ತಿದ್ದರಾಗಿ ಇದು ಬ್ರಾಹಣರ ಶ್ರೀ ವೈಷ್ಣವ ಪಂಥದ ಪ್ರಮುಖ ಕೇಂದ್ರವಾಯಿತು. ದಕ್ಷಿಣ ಭಾರತದಲ್ಲಿ ಶ್ರೀ ವೈಷ್ಣವ ಕ್ಷೇತ್ರಗಳೆಂದು ಖ್ಯಾತವಾಗಿರುವ ನಾಲ್ಕು ಪುಣ್ಯಕ್ಷೇತ್ರಗಳ ಪೈಕಿ ಮೇಲುಕೋಟೆಯೂ ಒಂದು. ಇನ್ನುಳಿದ




ಮೂರು ಕ್ಷೇತ್ರಗಳು ಕಂಚಿ, ತಿರುಪತಿ ಮತ್ತು ಶ್ರೀರಂಗಂ. ಕೃತಯುಗದಲ್ಲಿ ಸನತ್ಕುಮಾರ ಇಲ್ಲಿ ತಿರುನಾರಾಯಣ ಮೂರ್ತಿಯನ್ನು ಪ್ರತಿಷ್ಠಾಪಿಸಿ ನಾರಾಂಣಾದ್ರಿ ಎಂದೂ, ತ್ರೇತಾಯುಗದಲ್ಲಿ ದತ್ತಾತ್ರೇಯರು ಈ ಪರ್ವತದಲ್ಲಿ ವೇದ ಪಾರಾಯಣ ಮಾಡಿ ವೇದಾದ್ರಿಯೆಂದೂ, ದ್ವಾಪರದಲ್ಲಿ ಶ್ರೀಕೃಷ್ಣನಿಂದ ಪೂಜಿಸಲ್ಪಟ್ಟು ಯಾದವಾದ್ರಿಯೆಂದೂ, ಆಚಾರ್ಯ ರಾಮಾನುಚಾರ್ಯರು ಇಲ್ಲಿ ನೆಲೆಸಿ ಯತಿಶೈಲವೆಂದೂ ಹೆಸರು ಪಡೆದಿದೆ ಎನ್ನುತ್ತದೆ ಸ್ಥಳಪುರಾಣ. ಸಹಸ್ರಾರು ವರ್ಷಗಳ ಇತಿಹಾಸವುಳ್ಳ ಈ ಕ್ಷೇತ್ರ 14ನೇ ಶತಮಾನದಲ್ಲಿ ಮಹಮದೀಯರ ದಾಳಿಗೆ ಒಳಗಾಗಿತ್ತು. 1460ರಲ್ಲಿ ಹಾಳಾಗಿದ್ದ ದೇವಾಲಯವನ್ನು ವಿಜಯನಗರದ ಅರಸರು ಜೀರ್ಣೋದ್ಧಾರ ಮಾಡಿದರು. ಮತ್ತೆ 1771ರಲ್ಲಿ ಮರಾಠರು ಮೇಲುಕೋಟೆಯನ್ನು ಲೂಟಿ ಮಾಡಿದರು. ಅನಂತರ ಮತ್ತೆ ದೇಗುಲ ಜೀರ್ಣೋದ್ಧಾರಗೊಂಡು ಊರು ಪುನರ್ ನಿರ್ಮಾಣವಾಯಿತು.

ವಿಷ್ಣುವಿಗೆ ಸಮರ್ಪಿತವಾದ ಚೆಲುವನಾರಾಯಣಸ್ವಾಮಿ ದೇವಸ್ಥಾನ ತಿರುನಾರಾಯಣ, ಚೆಲುವರಾಯ ಎಂದೂ ಕರೆಯಲ್ಪಡುತ್ತದೆ.

ದೇವರ ಉತ್ಸವಮೂರ್ತಿಯನ್ನು ಚೆಲುವಪಿಲ್ಲೆರಾಯ ಎಂದು ಕರೆಯಲಾಗುತ್ತದೆ. ನಾವು ಹೋದ ಸಂಜೆ ವೇಳೆ ಉತ್ಸವಮೂರ್ತಿಯನ್ನು ಅಡ್ಡೆಯಲ್ಲಿಟ್ಟು ದೇವಸ್ಥಾನ ಸುತ್ತಾ ಪ್ರದಕ್ಷಿಣೆ ಮಾಡುವುದನ್ನು ವೀಕ್ಷಿಸಿದೆವು. ಈ ದೇವಸ್ಥಾನವು ಮೈಸೂರು ರಾಜಮನೆತನದ ಆಶ್ರಯದಲ್ಲಿದ್ದು ಒಡೆಯರು ಸ್ವಾಮಿಗೆ ಅಮೂಲ್ಯವಾದ ಆಭರಣಗಳನ್ನು ಹಾಕಿದ್ದಾರೆ. ದಾನಧರ್ಮಗಳ ಜೊತೆಗೆ ಕಲಾತ್ಮಕ ಮಂಟಪಗಳನ್ನು ಕಟ್ಟಿಸಿದ್ದಾರೆ. ಹಲವು ಭೂಭಾಗಗಳನ್ನು ಉಂಬಳಿಯಾಗಿ ನೀಡಿದ್ದಾರೆ. ಚಿಕ್ಕದೇವರಾಜರು ಯೋಗಾನರಸಿಂಹಸ್ವಾಮಿಯ ಬೆಟ್ಟಕ್ಕೆ ನೂತನ ರಾಜಗೋಪುರವನ್ನೂ ಮೆಟ್ಟಿಲುಗಳನ್ನು ನಿರ್ಮಿಸಿಕೊಟ್ಟಿದ್ದಾರೆ.

ಪ್ರತಿವರ್ಷ ಚೆಲುವ ನಾರಾಯಣಸ್ವಾಮಿ ದೇವಾಲಯದಲ್ಲಿ ಶ್ರೀಕೃಷ್ಣ ರಾಜಮುಡಿ, ರಾಜಮುಡಿ, ವೈರಮುಡಿ, ಬ್ರಹ್ಮೋತ್ಸವಗಳು ವೈಭವದಿಂದ 10 ದಿನಗಳ ಕಾಲ ನಡೆಯುತ್ತದೆ. 280 ಅಡಿ ಚಚ್ಚೌಕಾರದ ವಿಸ್ತಾರವಾದ ಕಟ್ಟಡ ಸುತ್ತಲೂ ಕೈಸಾಲೆ, ಮಹಾದ್ವಾರ, 150 ಅಡಿ ಎತ್ತರದ ರಾಜಗೋಪುರ, ಪ್ರಾಕಾರ, ಚಿಕ್ಕಗುಡಿಗಳು, ಯಾಗಶಾಲೆ, ಪಾಕಶಾಲೆ, ನಗರಂಗ, ಮಂಟಪಗಳನ್ನು ಒಳಗೊಂಡಿದೆ. ಸಭಾಮಂಟಪದ ಕಲ್ಲುಕಂಬಗಳಲ್ಲಿ ರಾಮಾಯಣ ಮತ್ತು ಮಹಾಭಾರತದ ಚಿತ್ರಣವಿದೆ. ಕೃಷ್ಣರಾಜಮುಡಿ ಮತ್ತು ವೈರಮುಡಿ ಅಥವಾ ವಜ್ರಮುಕುಟ ಎಂದು ಕರೆಯಲಾಗುವ 2 ಸುಂದರವಾದ ಕಿರೀಟಗಳನ್ನು ಒಡೆಯರು ಉಡುಗೊರೆಯಾಗಿ ನೀಡಿದ್ದಾರೆ. ಮಾರ್ಚ್ ಏಪ್ರಿಲ್‌ನಲ್ಲಿ ನಡೆಯುವ ವೈರಮುಡಿ ಉತ್ಸವವು ಹೆಸರುವಾಸಿಯಾಗಿದೆ. ಆ ದಿನ ಮುಖ್ಯ ದೇವರು ತಿರುನಾರಾಯಣನನ್ನು ವಜ್ರದ ಕೀರಿಟದಿಂದ ಅಲಂಕರಿಸಿ ಮೆರವಣಿಗೆಯಲ್ಲಿ ಕರೆದೊಯ್ಯಲಾಗುತ್ತದೆ.

ಬೆಟ್ಟದ ಮೇಲಿನ ಯೋಗನರಸಿಂಹಸ್ವಾಮಿ ದೇವಾಲಯವು ನರಸಿಂಹನಿಗೆ ಅರ್ಪಿತವಾಗಿದೆ. ಗರ್ಭಗುಡಿಯ ಮುಖ್ಯ ದೇವರು ಕುಳಿತ ಯೋಗ ಭಂಗಿಯಲ್ಲಿದೆ. ಇದನ್ನು ನೋಡುವಾಗ ನಮ್ಮೂರಿನ (ಗೊರೂರು) ಶ್ರೀ ಯೋಗನರಸಿಂಹಸ್ವಾಮಿ ದೇವರ ನೆನಪಾಯಿತು. ಅಲ್ಲಿಯಂತೆಯೇ ಇಲ್ಲಿಯೂ ನರಸಿಂಹನು ಹಿರಣ್ಯಕಶೀಪುವನ್ನು ಕೊಲ್ಲುವ ದೃಶ್ಯವಿದೆ. 1853ರ ಹಿಂದಿನ ಕಾಲದ ಈ ದೇವಾಲಯದ ಒಳಗೆ ಸಂಸ್ಕೃತ ಪಾಠ ಶಾಲೆಯಿದೆ.

## ಚಿಕ್ಕಬೊಮ್ಮನಹಳ್ಳಿ ರಂಗನಾಥಸ್ವಾಮಿ ರಥೋತ್ಸವ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು : ತಾಲೂಕಿನ ದೇವಾಲಯಗಳ ಗ್ರಾಮ ಚಿಕ್ಕಬೊಮನಹಳ್ಳಿ ಶ್ರೀರಂಗನಾಥಸ್ವಾಮಿ ಮಹಾರಥೋತ್ಸವವು ವಿವಿಧ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಭಕ್ತರ ಸಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಜಾತ್ರಾ ಮಹೋತ್ಸವ ಅಂಗವಾಗಿ ದೇವಾಲಯದ ಆವರಣದಲ್ಲಿ ಗುರುವಾರ ಸಂಜೆಯಿಂದಲೇ ಧರ್ಮಧ್ವಜಾರೋಹಣ ಮೊದಲಾದ ಪೂಜಾ ವಿಧಿ ವಿಧಾನಗಳು ನೆರವೇರಿದವು. ರಥೋತ್ಸವ ಪ್ರಯುಕ್ತ ಶುಕ್ರವಾರ ಬೆಳಗಿನಿಂದ ದೇವಾಲಯದಲ್ಲಿ ವಿಶೇಷ ಪೂಜಾ ಕಾರ್ಯಗಳು, ಹೋಮ, ಹವನಗಳು ಶ್ರೀ ಶಂಭುನಾಥಸ್ವಾಮೀಜಿಯವರ ನೇತೃತ್ವದಲ್ಲಿ ನೆರವೇರಿದವು.

ಸಂಜೆ ಅಲಂಕೃತ ರಥದಲ್ಲಿ ಶ್ರೀ ರಂಗನಾಥಸ್ವಾಮಿಯವರ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಪೂಜೆ ಸಲ್ಲಿಸಿ ರಥಾರೋಹಣ ನಡೆಸಿ ಹಾಸನ ಮತ್ತು ಕೊಡಗು ಜಿಲ್ಲೆಯ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಕಾರ್ಯದರ್ಶಿ ಶ್ರೀ ಶಂಭುನಾಥ ಸ್ವಾಮೀಜಿ, ಕಬ್ಬಳಿ ಶಾಖಾ ಮಠದ ಶಿವಪುತ್ರನಾಥ



ಸ್ವಾಮೀಜಿ ರವರು ಬಲಿಪೂಜೆ ಹಾಗೂ ರಥಕ್ಕೆ ಪೂಜೆ ಸಲ್ಲಿಸಿ ಕದಳಿ ಛೇದನ ಮಾಡಿ ರಥೋತ್ಸವಕ್ಕೆ ಚಾಲನೆ ನೀಡಿದರು.

ಬಳಿಕ ಭಕ್ತರು ಹರ್ಷೋದ್ಗಾರದಿಂದ ಸಂಜೆ 5.30ಕ್ಕೆ ಜೈಕಾರ ಹಾಕುತ್ತಾ ರಥವನ್ನು ಎಳೆದು ಹಣ್ಣು ದವನ ಎಸೆಯುವ ಮೂಲಕ ಭಕ್ತಿ ಸಮರ್ಪಿಸಿದರು. ರಥೋತ್ಸವದ ಅಂಗವಾಗಿ ದೇವಾಲಯದಲ್ಲಿರುವ ರಂಗನಾಥಸ್ವಾಮಿ, ಲಕ್ಷ್ಮೀ, ಆಂಜನೇಯ, ಗಣಪತಿ ಮೂರ್ತಿಗಳಿಗೆ ಮಾಡಿದ್ದ ವಿಶೇಷ ಹೂವಿನ ಅಲಂಕಾರ ಭಕ್ತರ ಮನಸೆಳೆಯಿತು.

ವೀರಗಾಸೆ, ಪೂಜಾ ಕುಣಿತ, ಬ್ಯಾಂಡ್ ಸೆಟ್ ಹಾಗೂ ಮಂಗಳ ವಾದ್ಯವು ಉತ್ಸವಕ್ಕೆ ಮೆರಗು ನೀಡಿತು. ಜಿಲ್ಲೆಯ ವಿವಿಧ ಭಾಗಗಳ ಆಸ್ತಿಕ ಸದ್ಭಕ್ತರು ಹಾಗೂ ಸುತ್ತಮುತ್ತಲ ಹತ್ತಾರು ಹಳ್ಳಿಗಳಿಂದ ಆಗಮಿಸಿದ್ದ ಗ್ರಾಮಸ್ಥರು ಸರದಿ ಸಾಲಿನಲ್ಲಿ ನಿಂತು ಶ್ರೀ ರಂಗನಾಥಸ್ವಾಮಿಗೆ ಪೂಜೆ ಸಲ್ಲಿಸಿ ದರ್ಶನ ಪಡೆದು ಪುನೀತರಾದರು.

ದೇವಾಲಯದ ಸುತ್ತಮುತ್ತಲ ಪ್ರದೇಶದಲ್ಲಿ ಪುರಿ ಅಂಗಡಿ, ಸಿಹಿ ತಿಂಡಿ ತಿನಿಸುಗಳ ಅಂಗಡಿ, ಮಕ್ಕಳ ಆಟಿಕೆಯ ಅಂಗಡಿ, ಕಬ್ಬಿನ ಹಾಲಿನ ಅಂಗಡಿ, ಐಸ್ ಕ್ರೀಂ ಅಂಗಡಿಗಳನ್ನು ತೆರೆಯುವ ಮೂಲಕ ವ್ಯಾಪಾರಸ್ಥರು ಜಾತ್ರೆಯ ಕಳೆ ಹೆಚ್ಚಿಸಿದ್ದರು.

ರಥೋತ್ಸವ ಸಂದರ್ಭದಲ್ಲಿ ಮಾಳೇನಹಳ್ಳಿ ಅಣ್ಣೇಗೌಡ, ಬನ್ನೂರು ಅಣ್ಣಯ್ಯ, ಕೋಡಿಗೌಡ, ಪ್ರದೀಪ ರಾಮಸ್ವಾಮಿ ಚೌಡೇಗೌಡ, ಹಂಡ್ರಂಗಿ ಚನ್ನರಾಜು, ಪಾಂಡು, ಕೇಶವೇಗೌಡ ಹೊಸನಗರ, ಹೊನಗಾನಹಳ್ಳಿ ಶ್ರೀನಾಥ್, ಮಹೇಶ್ ಹೊಡೆನೂರ್, ಬೊಮನಹಳ್ಳಿ ಕೃಷ್ಣ, ನವೀನ್ ಕುಮಾರ ಇತರರಿದ್ದರು.

## ಲಯನ್ಸ್ ಸಂಸ್ಥೆಯಿಂದ ಅನೇಕ ಸೇವಾ ಕಾರ್ಯ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಆರೋಗ್ಯ, ಶಿಕ್ಷಣ, ಪರಿಸರ ಸಂರಕ್ಷಣೆ ಸೇರಿ ಹಲವು ಕ್ಷೇತ್ರಗಳಲ್ಲಿ ಸಮಾಜಮುಖಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತಿದ್ದು, ಜನಸೇವೆಯನ್ನು ಮುಖ್ಯ ಗುರಿಯಾಗಿಸಿಕೊಂಡು ಕಾರ್ಯನಿರ್ವಹಿಸುತ್ತಿದೆ ಎಂದು ಲಯನ್ಸ್‌ಸಂಸ್ಥೆಯ ಜಿಲ್ಲಾ ಗವರ್ನರ್ ಕುಡುಪ ಅರವಿಂದ್ ಶಣೈ ಹೇಳಿದರು.

ನಗರದ ಲಯನ್ಸ್‌ಸೇವಾ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವದಾದ್ಯಂತ 250ಕ್ಕೂ ಹೆಚ್ಚು ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಲಯನ್ಸ್ ಸಂಸ್ಥೆ ಸುಮಾರು 14 ಲಕ್ಷಕ್ಕೂ ಹೆಚ್ಚು ಸದಸ್ಯರನ್ನು ಹೊಂದಿರುವ ಅತಿ ದೊಡ್ಡ ಸೇವಾ ಸಂಸ್ಥೆಯಾಗಿದೆ. ಜಿಲ್ಲೆಯಲ್ಲಿ ಮಾತ್ರವೇ ಸುಮಾರು 4,600ಕ್ಕೂ ಹೆಚ್ಚು ಸದಸ್ಯರು ವಿವಿಧ ಸಾಮಾಜಿಕ ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಹೇಳಿದರು.

ಲಯನ್ಸ್‌ಸಂಸ್ಥೆ ಆರೋಗ್ಯ, ಶಿಕ್ಷಣ, ಪರಿಸರ ಸಂರಕ್ಷಣೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಮಾಜದ ಹಿತಕ್ಕಾಗಿ ಅನೇಕ ಸೇವಾ ಕಾರ್ಯಕ್ರಮ ನಿರಂತರವಾಗಿ ಹಮಿಕೊಂಡು ಬರುತ್ತಿದ್ದು, ಜನಸೇವೆಯನ್ನೇ ತನ್ನ ಮುಖ್ಯ ಧ್ಯೇಯವಾಗಿಸಿಕೊಂಡು ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ಸಕಲೇಶಪುರ ಲಯನ್ಸ್‌ಕ್ಲಬ್ ತಾಲ್ಲೂಕು ಅಧ್ಯಕ್ಷ ಗಿರೀಶ್ ಮಾತನಾಡಿ, ಸಕಲೇಶಪುರ ಲಯನ್ಸ್ ಸಂಸ್ಥೆ ಹಲವು ವರ್ಷಗಳಿಂದ ವಿವಿಧ ಸಾಮಾಜಿಕ ಸೇವಾ ಕಾರ್ಯಗಳನ್ನು ಕೈಗೊಂಡು ಜನರಿಗೆ ನೆರವಾಗುತ್ತಿದೆ. ಸಂಸ್ಥೆ ಈಗ 50ನೇ ವರ್ಷದ ಸಂಭ್ರಮದತ್ತ ಸಾಗುತ್ತಿದ್ದು, ಮುಂದಿನ ವರ್ಷ ಸ್ವರ್ಣ ಮಹೋತ್ಸವ ಅದ್ದೂರಿಯಾಗಿ ಆಚರಿಸಲು ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

ಸಂಜಿತ್ ಶೆಟ್ಟಿ ಮಾತನಾಡಿ, ಹಿಂದಿನ 49ನೇ ಅಧ್ಯಕ್ಷ ಉದಯವಾರ ಅವರ ಅವಧಿಯಲ್ಲಿ ಹಿಂದು ರುದ್ರಭೂಮಿ ಅಭಿವೃದ್ಧಿ ಸೇರಿ ಹಲವು ಮಹತ್ವದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಪ್ರಸ್ತುತ ಅಧ್ಯಕ್ಷ ಗಿರೀಶ್ ಅವರ ನೇತೃತ್ವದಲ್ಲಿ ಸಂಸ್ಥೆ ಇನ್ನಷ್ಟು ಅಭಿವೃದ್ಧಿ ಕಾರ್ಯಗಳು ಹಾಗೂ ಸಮಾಜ ಸೇವಾ ಕಾರ್ಯಕ್ರಮಗಳನ್ನು ಮುಂದುವರಿಸುತ್ತಿದೆ ಎಂದು ಹೇಳಿದರು.

ಮುಂದಿನ ವರ್ಷ ನಡೆಯಲಿರುವ 50ನೇ ವರ್ಷದ ಸಂಭ್ರಮದ ಅಂಗವಾಗಿ ಇನ್ನೂ ಹಲವು ಅಭಿವೃದ್ಧಿ ಕಾರ್ಯಗಳು ಹಾಗೂ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮಿಕೊಳ್ಳಲು ಯೋಜನೆ ರೂಪಿಸಲಾಗಿದೆ ಎಂದು ಅವರು ತಿಳಿಸಿದರು.

ಲಯನ್ಸ್‌ಕ್ಲಬ್ ಕಾರ್ಯದರ್ಶಿ ಬಸವರಾಜ್, ಖಜಾಂಚಿ ಜಗದೀಶ್ ಇತರರಿದ್ದರು.

## ಇತಿಹಾಸದಲ್ಲಿ ಈ ದಿನ

### ಮಾರ್ಚ್-15

ಕ್ರಿ.ಪೂ. 44: ರೋಮ್‌ನ ಶಕ್ತಿಶಾಲಿ ಆಡಳಿತಗಾರ (ಜೂಲಿಯಸ್ ಸೀಸರ್) ಅವರನ್ನು ರೋಮ್‌ನ ಸೇನೆಟ್ ಸಭೆಯಲ್ಲಿ ಹತ್ಯೆ ಮಾಡಲಾಯಿತು. ಈ ದಿನವನ್ನು 'ಐಡ್ಸ್‌ಆಫ್ ಮಾರ್ಚ್' ಎಂದು ಕರೆಯಲಾಗುತ್ತದೆ.

1493: ಅನ್ವೇಷಕ ಕ್ರಿಸ್ಟೋಫರ್ ಕೊಲಂಬಸ್ ಅಮೆರಿಕ ಪ್ರವಾಸದ ಬಳಿಕ ಸ್ಪೇನ್‌ಗೆ ಮರಳಿದರು. 1985: ಇಂಟರ್ನೆಟ್ ಇತಿಹಾಸದಲ್ಲೇ ಮೊದಲ ಡೊಮೇನ್ ಹೆಸರು ನೋಂದಾಯಿಸಲಾಯಿತು.

ಜನನ

1934: ಭಾರತದ ಖ್ಯಾತ ವಿಜ್ಞಾನಿ ಮತ್ತು ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ

1940: ಭಾರತದ ಮಾಜಿ ಕ್ರಿಕೆಟ್ ಆಟಗಾರ ಬಿಷನ್ ಸಿಂಗ್ ಬೇಡಿ

## ಮರಸು ಗ್ರಾಮದಲ್ಲಿ ರಂಗನಾಥಸ್ವಾಮಿ-ಉಡುಸಲಮ್ಮ ಜಾತ್ರೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ತಾಲ್ಲೂಕಿನ ಮರಸು ಗ್ರಾಮದ ಶ್ರೀ ತಿರುಮಲ ರಂಗನಾಥಸ್ವಾಮಿ ಮತ್ತು ಉಡುಸಲಮ ದೇವಿಯವರ ಜಾತ್ರೆ ಅತ್ಯಂತ ವೈಭವದಿಂದ ನಡೆಯಿತು.

ಶುಕ್ರವಾರ ರಾತ್ರಿ ತಿರುಮಲ ರಂಗನಾಥಸ್ವಾಮಿ ಮತ್ತು ಉಡುಸಲಮ ದೇವಿಯವರ ಅಡ್ಡೆ ದೇವರು ದೇವಸ್ಥಾನದಿಂದ ಗ್ರಾಮದ ದೊಡ್ಡಕೆರೆ ಗೌರಿ ಕಡಲು ಗಂಗಾಸ್ಥಾನಕ್ಕೆ ರಾತ್ರಿ 2 ಗಂಟೆಗೆ ತಲುಪಿದವು. ಗಂಗಾಸ್ಥಾನದಿಂದ ಮಡಿವಾಳ ವಂಶಸ್ಥರಾದ ವೀರೇಶ ಅವರು ಉಡುಸಲಮ ಕಳಸವನ್ನು ಹೊತ್ತು ನಡೆಮುಡಿಯಲ್ಲಿ ವಾದ್ಯಗೋಷ್ಠಿ, ಪಟಾಕಿ ಸಿಡಿತ,



ಹೊಗಳಿಕೆ ಹಾಡಿನೊಂದಿಗೆ ಶನಿವಾರ ಬೆಳಗ್ಗೆ 7ಕ್ಕೆ ದೇವಸ್ಥಾನದ ಬಳಿ ತಲುಪಿತು. ಗ್ರಾಮದ ಗಂಗಣ್ಣ ಹೊಗಳಿಕೆ ಹಾಡು ಹೇಳಿದರು.

ಪೂಜಾ ಕೈಂಕರ್ಯದ ನಂತರ ಕೆಂಡೋತ್ಸವ ನಡೆಯಿತು. ಸಾವಿರಾರು ಭಕ್ತರು ಕೆಂಡ ಹಾಯ್ದು ಪುನೀತರಾದರು. ಉಡುಸಲಮ ದೇವಿಗೆ 101 ಎಡೆ ಸಮರ್ಪಣೆ ಮಾಡಲಾಯಿತು. ಪುರಾತನ ಕಾಲದಿಂದ ನಡೆದು ಬಂದಿರುವಂತೆ ಮರಸು ಗ್ರಾಮದ ಸುತ್ತಮುತ್ತಲಿನ ಗ್ರಾಮ ದೇವತೆ, ಕೂಡುನಾಡು, ಗ್ರಾಮದ ಮುಖಂಡರು, ಅಡ್ಡೆ ಹೊರುವವರು, ಚಪ್ಪರ ಹಾಕಿದವರು, ದೀವಟಿಗೆ ಸೇರಿದಂತೆ ಜಾತ್ರೆಗೆ ಸಾಕ್ಷಿಯಾದ ಎಲ್ಲ ಗ್ರಾಮದ, ದೇವಸ್ಥಾನದ ಮುಖಂಡರಿಗೆ ಎಡೆ ಸಮರ್ಪಣೆ ಮಾಡಲಾಯಿತು.

ಜಾತ್ರೆ ಅಂಗವಾಗಿ ದೇವಸ್ಥಾನದಲ್ಲಿ ರಂಗನಾಥಸ್ವಾಮಿ, ಉಡುಸಲಮ ದೇವರಿಗೆ ಬೆಳ್ಳಿ ಅಲಂಕಾರ ಮಾಡಲಾಗಿತ್ತು. ಮಧ್ಯಾಹ್ನ ಮಹಾ ಮಂಗಳಾರತಿ ನಂತರ ಭಕ್ತರು ದರ್ಶನ ಪಡೆದರು.

ಮಾ. 15ರ ಭಾನುವಾರ ಸಂಜೆ 8 ಗಂಟೆಗೆ ದೇವಸ್ಥಾನದ ಆವರಣದಲ್ಲಿ ಶ್ರೀ ಹರಿಭಕ್ತ ಮಹಾಂದಾತ ಅಥವಾ ಶ್ರೀ ಲಕ್ಷ್ಮೀ, ಶನಿದೇವರ ಪಂಥ ಎಂಬ ಪೌರಾಣಿಕ ನಾಟಕ ನಡೆಯಲಿದೆ. ಸಂಸದ ಶ್ರೇಯಸ್ ಪಟೇಲ್, ಶಾಸಕ ಸಿಮೆಂಟ್ ಮಂಜು, ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ, ಮಾಜಿ ಸಚಿವ ಎಚ್.ಕೆ. ಕುಮಾರಸ್ವಾಮಿ, ತಹಶೀಲ್ದಾರ್ ಮಲ್ಲಿಕಾರ್ಜುನ, ಎಂ. ಮುರಳಿ ಮೋಹನ್ ಭಾಗವಹಿಸಲಿದ್ದಾರೆ.

# ಹದಿ ಹರೆಯಕ್ಕೆ ಬೇಕು ಮಾರ್ಗದರ್ಶನ

- ಪ್ರಶಾಂತ್.ಎನ್.ಆರ್.,
ಆಪ್ತ ಸಲಹಾ ಮನಃಶಾಸ್ತ್ರಜ್ಞರು ಮೊ: 9481545719


ಇತ್ತೀಚೆಗೆ ನನ್ನ ಮಗ ಯಾಕೋ ನನ್ನ ಮಾತೇ ಕೇಳುತ್ತಿಲ್ಲ, ಯಾವಾಗಲೂ ರೂಮ್ ಬಾಗಿಲು ಮುಚ್ಚಿಕೊಂಡಿರುತ್ತಾನೆ. ರೂಮ್ ಒಳಗೆ ಕಾಲಿಟ್ಟರೆ ರೇಗ್ತಾನೆ. ಕೇಳದೆ ಒಳ ಬರಬೇಡ ಅಂತಾನೆ, ಚಿಕ್ಕಚಿಕ್ಕ ವಿಷಯಕ್ಕೆ ಕೋಪ ಮಾಡ್ಕೊತಾನೆ, ಕೈಲಿರೊ ವಸ್ತುಗಳನ್ನು ಬಿಸಾಕ್ತಾನೆ, ಅವನಿಗೆ ಅವನ ಸ್ನೇಹಿತರೆ ಹೆಚ್ಚಾಗಿದ್ದಾರೆ. ಕೆಟ್ಟವರ ಸಹವಾಸ ಮಾಡ್ಬೇಡ ಅಂದ್ರೆ ಸಾಕು ಉರಿದು ಬೀಳ್ತಾನೆ. ಯಾವಾಗ್ಲೂ ಮೊಬೈಲ್, ಟಿ.ವಿ. ಲೋಕದಲ್ಲೇ ಮುಳುಗಿರ್ತಾನೆ. ಇದು ಸಾಮಾನ್ಯವಾಗಿ ಹದಿಹರೆಯದವರ ಪೋಷಕರು ತಮ ಮಕ್ಕಳ ಬಗ್ಗೆ ದೂರುವ ದಾಟಿ.

ಹೌದು ಆ ವಯಸ್ಸೇ ಅಂತಹದು. ಬಾಲ್ಯಾವಸ್ಥೆಯ ಪೊರೆ ಕಳಚಿ ವಯಸ್ಕಾವಸ್ಥೆಯ ಕಿರೀಟ ತೊಡುವ ಮಧ್ಯದ ಈ ಹದಿಯರೆಯ ಪ್ರತಿಯೊಬ್ಬರ ಜೀವನದಲ್ಲಿಯೂ ಮರೆಯಲಾಗದ ನೆನಪು. ಆಂಗ್ಲ ಭಾಷೆಯಲ್ಲಿ ಅಡೊಲೆಸೆನ್ಸ್ ಎಂದು ಹೆಸರಿರುವ ಈ ಅವಸ್ಥೆ ಪರಿಪಕ್ವತೆಯೆಡೆಗೆ ಎಂಬ ಶಾಬ್ದಿಕ ಅರ್ಥ ಹೊಂದಿದೆ. ಕವಿ ನುಡಿಯಂತೆ ಇದು ಸಸಿ ಚಿಗುರಿ ಮರವಾಗುವ ವಸಂತ ಕಾಲ. ಇದಕ್ಕೆ ಕೌಮಾರ್ಯಾವಸ್ಥೆ, ಕಿಶೋರಾವಸ್ಥೆ, ತಾರುಣ್ಯಾವಸ್ಥೆ ಎಂದೂ ಕರೆಯುವುದರ ಜೊತೆಗೆ ಜನಪದರ ಅನುಭವದಂತೆ ಮಂಗ್ಯಾನ ವಯಸ್ಸು.

ಯಾರು ಹದಿಯರೆಯದವರು? ಭಾರತೀಯ ಪರಿಸರಕ್ಕೆ ಅನುಗುಣವಾಗಿ ಸಾಮಾನ್ಯವಾಗಿ 13 ರಿಂದ 18ರ ವಯಸ್ಸಿನ ಹುಡುಗಿಯರು ಹಾಗು 14 ರಿಂದ 19 ರ ವಯಸ್ಸಿನ ಹುಡುಗರನ್ನು ಹದಿಹರೆಯದವರು ಎಂದು ಪರಿಗಣಿಸಲಾಗುತ್ತದೆ. ಈ ವಯಸ್ಸಿನಲ್ಲಿ ದೇಹ ಮನಸ್ಸು, ಭಾವನೆ, ಬುದ್ಧಿಶಕ್ತಿಯಲ್ಲಿ ಕ್ಷಿಪ್ರ ಪ್ರಗತಿ ಹಾಗು ಬದಲಾವಣೆಗುಳು ಕಂಡುಬರುತ್ತವೆ.

ಹುಚ್ಚುಕೋಡಿ ಮನಸ್ಸು: ದ.ರಾ ಬೇಂದ್ರೆಯವರು ಹೇಳಿರುವಂತೆ, ಹದಿನಾರರ ವಯಸ್ಸು, ಹುಚ್ಚು ಕೋಡಿ ಮನಸ್ಸು. ಈ ಅವಧಿಯಲ್ಲಿ ದೇಹ ಮನಸ್ಸು, ಭಾವನೆ, ಬುದ್ದಿ ನಮ ಮಾತು ಕೇಳುವುದಿಲ್ಲ. ನಿಲ್ಲೆಂದರೆ, ನಿಲ್ಲುವುದಿಲ್ಲ. ಓಡೆಂದರೆ ಓಡುವುದಿಲ್ಲ. ಮಲಗೆಂದರೆ ಮಲಗುವುದಿಲ್ಲ. ಈ ಬದಲಾವಣೆಗಳ ಸಂಕೀರ್ಣತೆ, ಸಂಕ್ರಮಣ ಹಲವು ಸಮಸ್ಯೆಗಳನ್ನು ತಂದೊಡ್ಡುತ್ತವೆ.

ಡಬಲ್ ರೋಲ್: ಹದಿಹರೆಯದಲ್ಲಿ ಕಂಡುಬರುವ ಪ್ರಮುಖ ಸಮಸ್ಯೆ ಎಂದರೆ ವೈರುಧ್ಯಗಳ ಸಮಾಗಮ. ಇದೊಂದು ರೀತಿ ತ್ರಿಶಂಖು ಸ್ವರ್ಗ. ಇತ್ತ ಬಾಲ್ಯವೂ ಅಲ್ಲ, ಅತ್ತ ವಯಸ್ಕಾವಸ್ಥೆಯೂ ಅಲ್ಲದ ಪರಿಸ್ಥಿತಿಯಲ್ಲಿ ತರುಣ, ತರುಣಿಯರು ಒಳಲಾಡುತ್ತಾರೆ. ಹಿರಿಯರಿಂದ ಬೈಸಿಕೊಳ್ಳುತ್ತಾರೆ, ಅವರನ್ನೂ ಬೈಯುತ್ತಾರೆ. ಸ್ವತಃ ನೋವು ಅನುಭವಿಸುತ್ತಾರೆ. ಇತರರನ್ನೂ ನೋಯಿಸುತ್ತಾರೆ. ಏಕ ಕಾಲಕ್ಕೆ ಪರಸ್ಪರ ವಿರುದ್ಧ ಗುಣ, ಸ್ವಭಾವಗಳನ್ನು ಇವರು ಅಭಿವ್ಯಕ್ತಿಸುತ್ತಾರೆ. ಏಕತಾನತೆ- ಸಾಂಘಿಕತೆ, ಸ್ವತಂತ್ರ್ಯ-ನಿರ್ಬಂಧಿತ, ಸ್ವಾವಲಂಬನೆ-ಪರಾವಲಂಬನೆ, ತ್ಯಾಗ-ಸ್ವಾರ್ಥ, ಸಹಕಾರ-ಅಸಹಾಕಾರ, ಸಹನಶೀಲ-ಕೋಪಿಷ್ಟ, ಶಿಸ್ತು ಅಶಿಸ್ತು, ಪ್ರಬುದ್ಧತೆ- ಅಪ್ರಬುದ್ಧತೆ, ಭದ್ರತೆ-ಅಭದ್ರತೆ, ಭೀತಿ-ನಿರ್ಭೀತಿ, ಆತಂಕ ನಿರಾತಂಕ, ದ್ವೇಷ-ಪ್ರೀತಿ, ಉತ್ಸಾಹ-ನಿರುತ್ಸಾಹ, ಆದರ್ಶ-ವಾಸ್ತವ, ಕೀಳಿರಿಮೆ- ಮೇಲಿರಿಮೆ, ಜೀವನ ಪ್ರೀತಿ-ಆತಹತ್ಯಾ ಪ್ರವೃತ್ತಿ......ಇತ್ಯಾದಿ ಹೀಗೆ ವರ್ತನೆಗಳು ಏಕಕಾಲದಲ್ಲಿ ಕಂಡುಬರುತ್ತವೆ. ಹದಿಹರೆಯದ ಈ ಡಬಲ್ ರೋಲ್ ಪೋಷಕರು, ಒಡಹುಟ್ಟಿದವರು, ಸಂಬಂಧಿಗಳೂ, ಸ್ನೇಹಿತರು,



ಶಿಕ್ಷಕರು, ಅಪರಿಚಿತರು ಹೀಗೆ ಎಲ್ಲರ ಮುಂದೆಯೂ ಅಭಿವ್ಯಕ್ತವಾಗುತ್ತದೆ.

ಈ ಕ್ಷಣ ಉತ್ಸಾಹದ ಬುಗ್ಗೆಯಂತಿದ್ದ ತರುಣ ತರುಣಿಯರು ಮರುಕ್ಷಣದಲ್ಲಿ ನಿರುತ್ಸಾಹಿಗಳಾಗುತ್ತಾರೆ. ಪೋಷಕರನ್ನುಅತಿಯಾಗಿ ಪ್ರೀತಿಸುತ್ತಾರೆ, ಹಾಗೆಯೆ ಅವರ ವಿರುದ್ಧ ಕೋಪ-ತಾಪವನೂ ಪ್ರದರ್ಶಿಸುತ್ತಾರೆ. ಸ್ನೇಹಿತರೊಂದಿಗೆ ಸ್ವಚ್ಛಂದ, ಸ್ವತಂತ್ರ್ಯ ಜೀವನ ಅನುಭವಿಸುತ್ತಾರೆ. ಪ್ರಬುದ್ದರಂತೆ ವರ್ತಿಸುತ್ತಾರೆ, ಮೊಂಡಾಟ ತೋರುತ್ತಾರೆ. ಕೆಲವೊಮೆ ಆದರ್ಶವಾದಿಗಳಂತೆ, ತ್ಯಾಗ, ಸಹಕಾರದ ಮಾತುಗಳನ್ನಾಡುತ್ತಾರೆ. ನಂತರ ವಾಸ್ತವವಾದಿಯಂತೆ ಸ್ವಾರ್ಥಿಗಳಾಗುತ್ತಾರೆ. ಸೋಲಿನಿಂದ ಕಂಗೆಡುತ್ತಾರೆ, ಗೆದ್ದರೆ ಬೀಗುತ್ತಾರೆ. ಮನೆ ಬಿಟ್ಟು ಸ್ವಾವಲಂಬಿಗಳಾಗಿ ಬದುಕಲು ಇಚ್ಛಿಸುತ್ತಾರೆ. ದಾರಿ ಕಾಣದೆ ಪರಾವಲಂಬಿಗಳಾಗುತ್ತಾರೆ. ಸಮಾಜ ಕಟ್ಟುವ ಮಾತನಾಡುತ್ತಾರೆ, ಸಮಾಜದ ವ್ಯವಸ್ಥೆಯನ್ನುಕಂಡು ಸಮಾಜವನ್ನು ನಾಶಪಡಿಸಬೇಕು ಎನ್ನುತ್ತಾರೆ. ಗುರು ಹಿರಿಯರ ಮಾರ್ಗದರ್ಶನದಲ್ಲಿ ಉತ್ತಮ ಜೀವನ ರೂಪಿಸಿಕೊಳ್ಳುತ್ತಾರೆ. ಜೀವನವನ್ನುಅತಿಯಾಗಿ ಪ್ರೀತಿಸುತ್ತಾರೆ. ಅದೇ ಜೀವನವನ್ನು ಆತಹತ್ಯೆಯ ಮೂಲಕ ಕೊನೆಗೊಳಿಸಿಕೊಳ್ಳುತ್ತಾರೆ.


ಸಮಸ್ಯೆಗೆ ಕಾರಣ: ಈ ಹಂತದಲ್ಲಿ ಕಂಡುಬರುವ ತೀವ್ರಗತಿಯ ದೈಹಿಕ, ಮಾನಸಿಕ, ಭಾವನಾತಕ, ಬೌದ್ಧಿಕ, ಬದಲಾವಣೆಗಳು, ಸಮ ವಸ್ಕರೊಂದಿಗಿನ ಹೋಲಿಕೆಗಳು, ಗ್ರಂಥಿಗಳು ಬಿಡುಗಡೆ ಮಾಡುವ ಹಾರ್ಮೋನ್‌ಗಳ ಏರುಪೇರಿನ ಕಾರ್ಯಾಚರಣೆ, ಅಗತ್ಯಗಳ ತೀವ್ರತೆ, ಪ್ರದರ್ಶನ ಪ್ರಿಯತೆ, ದುರ್ಬಲ ಮನಸ್ಥಿತಿ, ಅವಾಸ್ತವಿಕ ಗುರಿಗಳು, ಸಮೂಹ ಮಾಧ್ಯಮಗಳ ಪ್ರಭಾವ, ಅವೈಜ್ಞಾನಿಕ ಲೈಂಗಿಕ ಅರಿವು, ಶಿಕ್ಷಣ ಹಾಗು ವೃತ್ತಿಯಲ್ಲಿ ಅನಾರೋಗ್ಯಕರ ಸ್ಪರ್ಧೆ, ಸಮರ್ಪಕ ಮಾರ್ಗದರ್ಶನದ ಕೊರತೆಗಳೂ ಹದಿಹರೆಯದವರನ್ನು ಸಮಸ್ಯೆಯ ಸುಳಿಗೆ ನೂಕುತ್ತವೆ.

ಆತಹತ್ಯಾ ಪ್ರವೃತ್ತಿ: ಪರೀಕ್ಷೆಯಲ್ಲಿ ಅನುತ್ತೀರ್ಣತೆ, ಪ್ರೇಮ ವೈಫಲ್ಯ, ಭವಿಷ್ಯದ ಕುರಿತು ಅಸ್ಥಿರತೆ- ಆತಂಕ ಮುಂತಾದ ಕಾರಣಗಳಿಂದ ಇತ್ತೀಚೆಗೆ ಹರೆಯದ ಹುಡುಗ, ಹುಡುಗಿಯರಲ್ಲಿ ಆತಹತ್ಯಾ ಪ್ರವೃತಿ ಹೆಚ್ಚಾಗುತ್ತಿದೆ. ಅದೂ ಅಲ್ಲದೆ ಪೋಷಕರು, ಶಿಕ್ಷಕರು ಬುದ್ದಿಮಾತು ಹೇಳಿದರು. ತನಗೆ ಬೇಕಾದದ್ದನ್ನು ಕೊಡಿಸಲಿಲ್ಲವೆಂದು, ಪಾಕೆಟ್ ಮನಿ ಕೊಡಲಿಲ್ಲವೆಂದು ಹೀಗೆ ಕ್ಷುಲ್ಲಕ ಕಾರಣಗಳಿಗೆ ತಮ ಜೀವ ಕಳೆದುಕೊಂಡವರೆಷ್ಟೋ. ಬದಲಾದ ಕಾಲಘಟ್ಟ, ಜೀವನ ಕ್ರಮ, ಬದಲಾದ ಮನೋಭಾವ, ಬದಲಾದ ನಿರೀಕ್ಷೆಗಳು, ಸಂಬಂಧಗಳ ಶಿಥಿಲತೆ ಇತ್ಯಾದಿಗಳು ಈ ಆತಹತ್ಯಾ ಪ್ರವೃತ್ತಿ ಹೆಚ್ಚಲು ಕಾರಣಗಳಾಗಿವೆ.

ಮಾರ್ಗದರ್ಶನ: ಹದಿಹರೆಯದವರಲ್ಲಿ ಎಲ್ಲವನ್ನೂ ಸಮವಾಗಿ ಸ್ವೀಕರಿಸುವ ಸ್ಥಿತಪ್ರಜ್ಞತೆ ಇರುವುದಿಲ್ಲ. ಪ್ರಬುದ್ಧತೆಯ ಕೊರತೆಯಿಂದ ಕೆಲವೊಮೆ ತಪ್ಪು ನಿರ್ಣಯಗಳು ಕಂಡುಬರುತ್ತವೆ. ಅವರಲ್ಲಿ ವಾಸ್ತವ ಸಾಮರ್ಥ್ಯದ ಅರಿವು ಮೂಡಿಸಿ, ಯೋಗ್ಯ ಮಾರ್ಗದರ್ಶನ ನೀಡಿದರೆ, ಅವರು ಸಮಾಜದ ಒಬ್ಬ ಜವಾಬ್ದಾರಿಯುತ ವ್ಯಕ್ತಿಯನ್ನಾಗಿ ಮಾಡಲು ಸಹಕಾರಿಯಾಗುತ್ತದೆ.

ತಜ್ಞರ ಸಲಹೆಗಳು; ಹದಿಹರೆಯದವರ ಮನಸ್ಥಿತಿ ಕಾದ ಕಬ್ಬಿಣದಂತಿರುತ್ತದೆ. ಈ ಹಂತದಲ್ಲಿ ಅವರನ್ನು ಬೇಕಾದಂತೆ ಮಣಿಸಬಹುದು. ತರುಣತರುಣಿಯರಿಗೆ ಸಂಬಂಧಿಸಿದಂತೆ ಪೋಷಕರು, ಗುರು ಹಿರಿಯರು ಅನುಸರಿಸಬೇಕಾದ ಕ್ರಮಗಳ ಕುರಿತು ತಜ್ಞರ ಸಲಹೆಗಳು ಹೀಗಿವೆ.

1. ಶಿಕ್ಷಣ, ವೃತ್ತಿ ಹಾಗು ವೈಯಕ್ತಿಕ ಸಮಸ್ಯೆಗಳಿಗೀ ಸಂಬಂಧಿಸಿದ ಸಮಯೋಚಿತ ಮಾರ್ಗದರ್ಶನ ಹಾಗು ಅಗತ್ಯ ಬಿದ್ದರೆ ಆಪ್ತ ಸಮಾಲೋಚನೆ



ಒದಗಿಸಬೇಕು.

2. ಅವರ ನೋವು ನಲಿವುಗಳಿಗೆ ಸ್ಪಂದಿಸಬೇಕು. ಅವರ ಕಣ್ಣೀರಿಗೆ ಸಾಂತ್ವನ ಹೇಳಬೇಕು. ಸೋತು ಕೈಚೆಲ್ಲಿ ಕುಳಿತಾಗ ಧೈರ್ಯ ತುಂಬಬೇಕು. ಗೆದ್ದಾಗ ಬೆನ್ನು ತಟ್ಟಿ ಪ್ರೊತ್ಸಾಹಿಸಬೇಕು.

3. ವಿಭಿನ್ನ ವ್ಯಕ್ತಿತ್ವವನ್ನು ಅಭಿಪ್ರಾಯಗಳನ್ನು ಗೌರವಿಸಬೇಕು.

4. ಸಮೂಹ ಮಾಧ್ಯಮಗಳು ವಾಸ್ತವಿಕ, ಮೌಲ್ಯಾಧಾರಿತ ಕಾರ್ಯಕ್ರಮಗಳನ್ನು, ಸುದ್ದಿಗಳನ್ನು ಪ್ರಸಾರ ಮಾಡಬೇಕು.

5. ಸಂಬಂಧಗಳ ಪರಿಕಲ್ಪನೆ, ಸಾಮಾಜಿಕ ಜವಾಬ್ದಾರಿಯನ್ನು ಮೂಡಿಸುವ ಭಾವನಾತಕ ಬುದ್ಧಿಶಕ್ತಿಯ ಅರಿವನ್ನು ಮೂಡಿಸಬೇಕು.

6. ಮೌಲ್ಯ ಶಿಕ್ಷಣ, ಜೀವನಕೌಶಲ್ಯಗಳನ್ನು ಕುರಿತು ಪಠ್ಯಕ್ರಮದಲ್ಲಿ ಕಡ್ಡಾಯವಾಗಿ ಅಳವಡಿಸಬೇಕು.

7. ವೈಜ್ಞಾನಿಕ ತಳಹದಿಯ ಲೈಂಗಿಕ ಶಿಕ್ಷಣ ನೀಡಬೇಕು.

8. ಅವರ ವಿಶೇಷ ಆಸಕ್ತಿ, ಅಭಿರುಚಿ, ಕೌಶಲಗಳನ್ನು ಗುರುತಿಸಿ ಪ್ರೋತ್ಸಾಹಿಸಬೇಕು.

9. ಆಯ್ಕೆಯ ಪರಿಜ್ಞಾನ, ಸೋಲು-ಗೆಲುವಿನ ಅನುಭವ ಹಾಗು ನಿರ್ಣಯಗಳನ್ನು ಕೈಗೊಳ್ಳುವಿಕೆಯ ಬಗ್ಗೆ ತರಬೇತಿ ನೀಡಬೇಕು.

10. ಮನಸ್ಥಿತಿಯ ಬದಲಾವಣೆಗೆಯೋಗ, ಧ್ಯಾನ, ಅಧ್ಯಾತದ ಲೇಪನವುಳ್ಳ ಯೋಗ್ಯ ವಾತಾವರಣಒದಗಿಸಬೇಕು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248